ಎಂ.ವಿ.ಸಿ. ನಂಃ 328/2024
ಪಿಡಬ್ಲ್ಯೂಃ1

ಸಾಕ್ಷಿಯನ್ನು ದಿಃ 28-03-2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಿ ಮುಂದುವರೆದ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರಃ ಶ್ರೀ ಪಿ ಬಿ ಟಿ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಗೆ ಸಂಬಂಧಿಸಿದಂತೆ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದರಲ್ಲಿ ನಮೂದಿಸಿರುವ ಮಜಕೂರುಗಳು ಸತ್ಯವಾಗಿದ್ದು, ಅದನ್ನು ಓದಿ ತಿಳಿದುಕೊಂಡು ನಂತರ ಅದಕ್ಕೆ ನನ್ನ ಸಹಿ ಹಾಕಿರುತ್ತೇನೆ.

ನಾನು ಅರ್ಜಿಯನ್ನು ಸಲ್ಲಿಸುವ ಕಾಲಕ್ಕೆ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಸಲ್ಲಿಸಿದ್ದು ಅವುಗಳನ್ನು ಪುನಃ ನೋಡಿದರೆ ಗುರುತಿಸಬಲ್ಲೆ.

ಸಾಕ್ಷಿಯು ಈ ಕೆಳಕಂಡ ದಾಖಲಾತಿಗಳನ್ನು ನೋಡಿ ಗುರುತಿಸಿರುತ್ತಾರೆ.

1. ನಿಪಿ.1- ಪ್ರ. ವ. ವರದಿಯ ಧೃಡೀಕೃತ ನಕಲು
2. ನಿಪಿ.2- ದೂರಿನ ಧೃಡೀಕೃತ ನಕಲು
3. ನಿಪಿ.3- ಅರ್ಜಿದಾರರ ಆಧಾರ ಕಾರ್ಡ‌ನ ನೋಟರಿ ಪ್ರತಿ
4. ನಿಪಿ.4- ಸ್ಥಳ ಪಂಚನಾಮೆಯ ಧೃಡೀಕೃತ ನಕಲು
5. ನಿಪಿ.5- ಸ್ಥಳದ ನಕ್ಷೆಯ ಧೃಡೀಕೃತ ನಕಲು
6. ನಿಪಿ.6- ಐ ಎಂವಿ ವರದಿಯ ಧೃಡೀಕೃತ ನಕಲು
7. ನಿಪಿ.7-ಗಾಯದ ಪ್ರಮಾಣ ಪತ್ರದ ಧೃಡೀಕೃತ ನಕಲು
8. ನಿಪಿ.8-ದೋಷರಾರೋಪಣ ಪಟ್ಟಿಯ ಧೃಡೀಕೃತ ನಕಲು
9. ನಿಪಿ.9- ಸಿಸಿ ನಂ. 539/2024 ರ ಆದೇಶ ಪುಟಗಳ ಧೃಡೀಕೃತ ನಕಲು
10. ನಿಪಿ.10 ಮತ್ತು 11- ಎರಡು ಸಲಹಾ ಚೀಟಿಗಳು
12. ನಿಪಿ-12 ಮತ್ತು 13 -ಲ್ಯಾಬ್ ವರದಿ
13. ನಿಪಿ- 14 ರಿಂದ 24 ರವರೆಗೆ ಮೆಡಿಕಲ್ ಬಿಲ್ಲುಗಳು
14. ನಿಪಿ-25 ಸ್ಯಾಲರಿ ಸರ್ಟಿಫಿಕೇಟ್ಗ ಎದುರುದಾರರ ಪರ ತಕರಾರು ಮತ್ತು ಪುರಾವೆಗೆ ಒಳಪಟ್ಟು ಗುರುತಿಸಿಸಲಾಯಿತು.
15. ನಿಪಿ-26 ರಿಂದ 218 ಎಕ್ಸರೇ
16. ನಿಪಿ- 29 ಪ್ಯಾನ್ ಕಾರ್ಡ ನೋಟರಿ ಪ್ರತಿ
17. ನಿಪಿ-30 ಗುರುತಿನ ಚೀಟಿ ನೋಟರಿ ಪ್ರತಿ

18. ನಿಪಿ–31 ರೇಶನ್ ಕಾರ್ಡ ನೋಟರಿ ಪ್ರತಿ
19. ನಿಪಿ– 32 ಎಸ್ ಎಸ್ ಎಲ್ ಸಿ ಮಾರ್ಕಸ್ ಕಾರ್ಡ ನೋಟರಿ ಪ್ರತಿ

ಆದುದರಿಂದ ಅರ್ಜಿಯಲ್ಲಿ ಕೇಳಿದಂತೆ ಆದೇಶ ಆಗಲು ಕೇಳಿಕೊಳ್ಳುತ್ತೇನೆ.

**ಪಾಟಿ ಸವಾಲುಃ 2 ನೇ ಎದುರುದಾರ ಪರ ಶ್ರೀ ಆರ್ ವಿ ಬಿ ವಕೀಲರಿಂದ**

ಮೈನುದ್ದೀನ್ ಕರೀಂ ಶೇಖ್ ನನ್ನ ಪರಿಚಯದವರು. ಅಪಘಾತವಾದ ನಂತರ ಪ್ರಥಮವಾಗಿ ನಾನು ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆ. ದಿಃ 24–04–202024 ರಂದು ಹೋಗಿದ್ದೆ. ಸರ್ಕಾರಿ ಆಸ್ಪತ್ರೆಯಲ್ಲಿ ಗಾಯದ ಹಿನ್ನೆಲೆಗೆ ರಸ್ತೆ ಅಪಗಾತ ಎಂದು ಹೇಳಿರುತ್ತೇನೆ. ಯಲ್ಲಾಪುರದಲ್ಲಿ ಎಂ ಎಲ್ ಸಿ ದಾಖಲು ಮಾಡಿ ಪೋಲಿಸರು ಬಂದು ವಿಚಾರಿಸಿದ್ದಾರೆ. ಪೊಲಿಸರಿಗೆ ನಾನು ಅಪಗಾತ ಬಗ್ಗೆ ಹೇಳಿರುತ್ತೇನೆ. ಆಸ್ಪತ್ರೆಯಲ್ಲಿ ಪೋಲಿಸರು ನನ್ನ ದೂರು ಮತ್ತು ಸಹಿ ಪಡೆದಿದ್ದಾರೆ. ಆಸ್ಪತ್ರೆಯಲ್ಲಿ ಎಂ ಎಲ್ ಸಿ ದಾಖಲಾಗಿರುವ ಬಗ್ಗೆ ಹಾಗೂ ದೂರು ಕೊಟ್ಟ ಬಗ್ಗೆ ದಾಖಲೆಗಳನ್ನು ಈ ಅರ್ಜಿಯಲ್ಲಿ ಹಾಜರು ಮಾಡಿಲ್ಲ ಎಂದರೆ ಸರಿ. ಮೈನುದ್ದೀನ್ ಕರೀಂ ಶೇಖ್ ಅಪಘಾತಕ್ಕೆ ಸಂಬಂಧಿಸಿ ದೂರು ಕೊಟ್ಟಿದ್ದಾರೆ. ಅವರು ಯಾವ ದಿವಸ ದೂರು ಕೊಟ್ಟಿದ್ದರು ನೆನಪಿಲ್ಲ. ನಾನು ಆ ಸಮಯದಲ್ಲಿ ಆಸ್ಪತ್ರೆಯಲ್ಲಿದ್ದೆ. ಯಲ್ಲಾಪುರ ಆಸ್ಪತ್ರೆಯಲ್ಲಿ 2 ದಿವಸ ಇದ್ದೆ. ಅದರ ನಂತರ ಹುಬ್ಬಳ್ಳಿ ಕಮ್ಮಾರ ಆಸ್ಪತ್ರೆಗೆ ದಾಖಲಾಗಿದ್ದೆ. ಅಲ್ಲಿ ಗಾಯಗಳು ಅಪಘಾತದಲ್ಲಿ ಆಗಿತ್ತು ಎಂದು ಹೇಳಿರುತ್ತೇನೆ. ನಾನು ನಾನೆ ಸ್ವತಃ ಮೊಟಾರ್ ಸೈಕಲ್ ನಿಂದ ಬಿದ್ದು ಗಾಯ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರ ವಾಹನ ಡಿಕ್ಕಿ ಹೊಡೆದು ಅಪಘಾತ ಪಡಿಸಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಮೈನುದ್ದೀನ್ ಖರೀ ಶೇಖ್ ನನ್ನ ಪರಿಚಯದವರಾಗಿದ್ದರಿಂದ ಮೂದು ದಿವಸಗಳ ನಂತರ ಸುಳ್ಳು ದೂರು ನೀಡಿ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. 1 ಎದುರುದಾರ ನನಗೆ ಪರಿಚಯದವರಾಗಿದ್ದು ಅವರ ಜೊತೆ ಶ್ಯಾಮಿಲಾಗಿ ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ಯಲ್ಲಾಪುರದವರು. 1 ಎದುರುದಾರರು ನನಗೇ ಮೊದಲಿನಿಂದಲೂ ಪರಿಚಯದವರು ಎಂದರೆ ಸರಿಯಲ್ಲ.

ನಾನು ದ್ವಿ ಚಕ್ರ ವಾಹನದ ಮೆಕ್ಯಾನಿಕ್ ಆಗಿ ಕೆಲಸ ಮಾಡುತ್ತೇನೆ. ನಾನು ಮೆಕ್ಯಾನಿಕ್ ತರಬೇತಿ ಪಡೆದಿದ್ದೇನೆ ತೋರಿಸಲು ಯಾವುದೇ ದಾಖಲೆ ಇಲ್ಲ. ನಾನು ಎಸಿ ಎಸ್ ಎಲ್ ಸಿ ಓದಿದ್ದೇನೆ. ನಾನು ದ್ವಿ ಚಕ್ರವಾಹನ ಮ್ಯಾಕೆನಿಕ್ ಕೆಲಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನಾನು

ಯಲ್ಲಾಪುರದಲ್ಲಿ ಮ್ಯಾಕಾನಿಕ್ ಆಗಿ ಕೆಲಸ ಮಾಡಿ ತಿಂಗಳಿಗ ರೂ. 25000 ದುಡಿಮೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಆದ ಗಾಯಗಳು ಸಾದಾ ಸ್ವರೂಪದ್ದು ಆಗಿದ್ದು ನಾನು ಸಂಪೂರ್ಣ ಗುಣ ಮುಖ ಆಗಿದ್ದೆನೆ ಎಂದರೆ ಸರಿಯಲ್ಲ. ನಾನು ಮದ್ದಿಗೆ 2 ಲಕ್ಷ ಮತ್ತು ಸಾರಿಗೆಗೆ ಕರ್ಚು ಮಾಡಿದ್ದೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರ ವಾಹನದಿಂದ ಯಾವುದೇ ಅಪಗಾತ ಆಗದೇ ಇದ್ದರು ಸಹ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಸುಳ್ಳು ವೇತನ ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣ 2 ನೇ ಎದುರುದಾರರ ನನಗೆ ಯಾವುದೇ ಪರಿಹಾರ ಕೊಡಲು ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರರಿಗೆ ವಾಹನ ಚಲಾಯಿಸಲು ಪರವಾನಿಗೆ ಇದೆಯೋ ಇಲ್ಲವೋ ಎನ್ನುವುದು ಗೊತ್ತಿಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಹಿ/-

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಕಾರವಾರ.